ಓ ಎಸ್ ನಂ.**9/2011**
ಪಿಡಬ್ಲ್ಯೂ.**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **19.08.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎ ಕೆ ವಕೀಲರಿಂದಃ–

ನನ್ನ ತಂದೆಯ ಹೆಸರು ಗೋವಿಂದಪ್ಪ ಹಾಗೂ ನನ್ನ ತಾಯಿಯ ಹೆಸರು ಆಂಜಿನಮ್ಮ. ನನ್ನ ತಾಯಿಯ ತಂದೆಯ ಹೆಸರು ಆಂಜಿನಪ್ಪ. ಅಂಜಿನಪ್ಪನವರ ತಂದೆ ಹೆಸರು ಮುನಿಶ್ಯಾಮಪ್ಪ. ಅವರಿಗೆ ಮುನಿಯಪ್ಪ ಎಂತಲೂ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ನನ್ನ ತಾತ ಅಂಜಿನಪ್ಪ ನವರಿಗೆ ಸೇರಿದ ಆಸ್ತಿ. ಸದರಿ ಆಸ್ತಿಯು ಅಂಜಿನಪ್ಪನವರಿಗೆ ಅವರ ತಂದೆ ಮುನಿಶ್ಯಾಮಪ್ಪನವರಿಂದ ಬಂದಿರುತ್ತದೆ. ದಾವಾ ಆಸ್ತಿಯು ಮೂಲತಃ ಮುನಿಶ್ಯಾಮಪ್ಪನವರಿಗೆ ಸೇರಿದ ಆಸ್ತಿಯಾಗಿತ್ತಾ? ಎಂದರೆ ಹೌದು. ಮುನಿಶ್ಯಾಮಪ್ಪನವರು ಯಾವಾಗ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಂಜಿನಪ್ಪನವರಿಗೆ ದಾವಾ ಅಸ್ತಿ ಯಾವಾಗ ಬಂತು ಎಂದರೆ ಗೊತ್ತಿಲ್ಲ ಆಗ ನಾವು ಚಿಕ್ಕವರಾಗಿದ್ದೆವು. ಆಂಜಿನಪ್ಪನವರು ಯಾವಾಗ ಮೃತಪಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಮುನಿಶ್ಯಾಮಪ್ಪ ಮತ್ತು ಅಂಜನಪ್ಪನವರ ಕುಟುಂಬಕ್ಕೆ ಸೇರಿಲ್ಲ ಹಾಗೂ ಅವರಿಗೂ ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಅಂಜನಪ್ಪನವರಿಗೆ ಸರೋಜಮ್ಮ ಎಂಬ ಏಕೈಕ ಮಗಳಿದ್ದಾಳೆ ಎಂದರೆ ಸರಿಯಲ್ಲ. ಆದರೆ ಅವರಿಗೆ ಆಂಜನಮ್ಮ ಮತ್ತು ಸರೋಜಮ್ಮ ಎಂಬ ಇಬ್ಬರು ಮಕ್ಕಳು ಇದ್ದಾರೆ. ಸರೋಜಮ್ಮನವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆಂಜನಪ್ಪನವರು ಇನ್ನೊಂದು ಮದುವೆಯಾಗಿದ್ದರು ಅವಳಿಗೆ ಸದರಿ ಸರೋಜಮ್ಮ ಜನಿಸಿರುತ್ತಾರೆ ಎಂದು ಹೇಳುತ್ತಾರೆ. ಅಂಜನಪ್ಪನವರು ಒಂದೇ ಮದುವೆಯಾಗಿದ್ದಾರೆ ಎಂದರೆ ಸರಿಯಲ್ಲ. ಆಂಜನಪ್ಪನವರು ಯಾವ ಯಾವಾಗ

ಸದರಿ ಎರಡು ಮದುವೆಗಳನ್ನು ಆಗಿದ್ದಾರೆ ಎಂದರೆ ಗೊತ್ತಿಲ್ಲ ಆದರೆ ನಮ್ಮ ತಾಯಿಯನ್ನು ಮೊದಲು ಮದುವೆಯಾಗಿದ್ದಾರೆ ಆದರೆ **2** ನೇ ಮದುವೆಯಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಆಂಜಿನಮ್ಮ. ಆಂಜನಪ್ಪನವರು ಯಾವಾಗ ಯಾರೊಂದಿಗೆ **2** ನೇ ಮದುವೆಯಾಗಿದ್ದಾರೆ ಎಂದರೆ ಗೊತ್ತಿಲ್ಲ. ಆಂಜಿನಪ್ಪನವರಿಗೆ ಎಷ್ಟು ಜನ ಹೆಂಡತಿ ಮತ್ತು ಮಕ್ಕಳು ಇದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹೌದು. ನಾನು ಈ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೇಟ್ ಮುನಿಯಪ್ಪ ಉಃ ಮುನಿಶ್ಯಾಮಪ್ಪ ಅವರ ಮಗ ಅಂಜನಪ್ಪ ಹಾಗೂ ಅವರ ಏಕೈಕ ಮಗಳಾದ ಸರೋಜಮ್ಮ ರವರು ಸೇರಿ ದಿನಾಂಕಃ **01.12.2006** ರಂದು ದಾವಾ ಆಸ್ತಿಯನ್ನು ನಿಪಿ **2** ರಂತೆ **3** ನೇ ಪ್ರತಿವಾದಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಆಂಜನಪ್ಪನವರ ಕುಟುಂಬಕ್ಕೆ ನಾನಾಗಲೀ ನನ್ನ ತಂದೆ ತಾಯಿಯಾಗಲೀ ಸೇರದೆ ಇರುವ ಕಾರಣ ಸದರಿ ಕ್ರಯ ಪತ್ರದಲ್ಲಿ ಗೋವಿಂದಪ್ಪ, ಅಂಜನಮ್ಮ ಹಾಗೂ ನನ್ನ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ನಿಪಿ **3** ರಾಮಕ್ಕನವರ ಮರಣ ಪ್ರಮಾಣ ಪತ್ರದಲ್ಲಿ ಅವರ ಗಂಡನ ಹೆಸರು ಆಂಜನಪ್ಪ ಎಂದು ಬರೆದಿದೆ ಎಂದರೆ ಸರಿಯಲ್ಲ. ರಾಮಕ್ಕನವರು ವೆಂಕಟಸ್ವಾಮಿ ಲೇಔಟ್, ಸುಬ್ಬಣ್ಣಪಾಳ್ಯ, ಬೆಂಗಳೂರು ನಲ್ಲಿ ಮೃತಪಟ್ಟಿದ್ದಾರಾ ಎಂದರೆ ಹೌದು. ರಾಮಕ್ಕನವರು ಮೃತಪಟ್ಟಾಗ ಸದರಿ ವಿಳಾಸದಲ್ಲಿ ವಾಸವಾಗಿದ್ದರ ಎಂದರೆ ಹೌದು. ಸದರಿ ವಿಳಾಸದಲ್ಲಿ ಇದ್ದ ಆಂಜನಪ್ಪನಿಗೂ ಮುನಿಯಪ್ಪ ಅಲಿಯಾಸ್ ಮುನಿಶ್ಯಾಮಪ್ಪನವರ ಮಗ ಆಂಜಿನಪ್ಪನವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಆಂಜನಪ್ಪ ಬಿನ್ ಮುನಿಯಪ್ಪ ಅಲಿಯಾಸ್ ಮುನಿಶ್ಯಾಮಪ್ಪನವರು ಬೆಂಗಳೂರು ನಗರ ರಾಮಕೃಷ್ಣ ಹೆಗ್ಗಡೆ ನಗರದಲ್ಲಿ ವಾಸವಾಗಿದ್ದರು ಆದರೆ ಸುಬ್ಬಣ್ಣನಪಾಳ್ಯದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂದ

ಇಲ್ಲದೇ ಇದ್ದರೂ ಕೂಡ ಸಂಬಂದ ಇಲ್ಲದೇ ಇರುವ ದಾಖಲೆಗಳನ್ನು ಇಟ್ಟುಕೊಂಡು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. **3** ನೇ ಪ್ರತಿವಾದಿಯು ದಿನಾಂಕಃ **01.12.2006** ರಿಂದ ದಾವಾ ಆಸ್ತಿಯ ಮೂಲ ಮಾಲೀಕರಾದ ಆಂಜನಪ್ಪ ಮತ್ತು ಅವರ ಮಗಳಿಂದ ಖರೀದಿ ಮಾಡಿ ಸಂಪೂರ್ಣ ಮಾಲೀಕರಾಗಿ ಸ್ವಾದೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಿಪಿ **3** ಮರಣ ಪ್ರಮಾಣ ಪತ್ರದಲ್ಲಿ ರಾಮಕ್ಕನ ಗಂಡನ ಹೆಸರು ಅಂಜನಪ್ಪ ಎಂದು ಇರುವ ಕಾರಣ ಸದರಿ ಹೆಸರು ಅಂಜನಪ್ಪನಿಗೆ ಸಾಮ್ಯತೆ ಇರುವ ಕಾರಣ ಅವರೆ ಅಂಜನಪ್ಪ ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ನನ್ನ ತಂದೆ ತಾಯಿ ಗೋವಿಂದಪ್ಪ ಹಾಗೂ ಆಂಜಿನಮ್ಮ ನವರಾಗಲೀ ದಾವಾ ಆಸ್ತಿಯಲ್ಲಿ ಯಾವತ್ತಿಗೂ ಕೂಡ ಸ್ವಾದೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಪಹಣಿಯು ಆಂಜಿನಪ್ಪನವರ ಹೆಸರಿನಲ್ಲಿದೆ ಎಂದರೆ ಸರಿ. ಪಹಣಿಯ ಕಲಂ **9** ರಲ್ಲಿ ದಾವಾ ಸ್ವತ್ತು ಆಂಜಿನಪ್ಪ ಬಿನ್ ಲೇಟ್ ಮುನಿಯಪ್ಪ ರವರ ಹೆಸರಿನಲ್ಲಿದೆ ದಾವಾ ಆಸ್ತಿಯ ಖಾತೆ ಇದೆ ಎಂದರೆ ಸರಿ. ಸದರಿ ಆಂಜಿನಪ್ಪ ಬಿನ್ ಲೇಟ್ ಮುನಿಯಪ್ಪ ಯಾರು ಎಂದರೆ ಅವರು ಬೇರೆಯವರು. ಆದರೆ ಆಂಜಿನಪ್ಪ ಬಿನ್ ಮುನಿಶ್ಯಾಮಪ್ಪ ನಮ್ಮ ಕುಟುಂಬಕ್ಕೆ ಸೇರಿದವರು. ನಿಪಿ **4** ಪಹಣಿಯಲ್ಲಿ ನಮೂದಾಗಿರುವ ಆಂಜಿನಪ್ಪ ಬಿನ್ ಲೇಟ್ ಮುನಿಯಪ್ಪ ನನ್ನ ತಾತ ಅಲ್ಲ ಎಂದರೆ ಸರಿ. ಈಗ ದಾವಾ ಆಸ್ತಿಯ ಪಹಣಿ **3** ನೇಪ್ರತಿವಾದಿಯ ಹೆಸರಿನಲ್ಲಿ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ಈ ಪ್ರಕರಣ ನಡೆಯುವಾಗ ನಾವು ಖಾತೆ ಬದಲಾವಣೆಯನ್ನು ತಡೆಹಿಡಿದಿದ್ದರೂ ಕೂಡ **3** ನೇ ಪ್ರತಿವಾದಿಯು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ ಸಾಕ್ಷಿಗೆ ಪಹಣಿಯ ಡಿಜಿಟಲ್ ಪ್ರತಿಯನ್ನು ತೋರಿಸಿದಾಗ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ **1** ಎಂದು ಗುರುತಿಸಲಾಯಿತು. ನಿಮ್ಮ ಅಜ್ಜಿ ರಾಮಕ್ಕನ ಹೆಸರಿಗಾಗಲೀ ಅಥವಾ ನಿಮ್ಮ ತಂದೆ ತಾಯಿಯ ಹೆಸರಿಗಾಗಲೀ ಅಥವಾ ನಿಮ್ಮ ಹೆಸರಿಗಾಗಲೀ ಯಾವತ್ತಾದರೂ ದಾವಾ ಅಸ್ತಿಯ ಖಾತೆ ಬಂದಿತ್ತಾ ಎಂದರೆ ಇಲ್ಲ. ನೀವು ನಾಲ್ಕು ಜನ ಯಾವತ್ತಾದರೂ ಕಂದಾಯ ಕಟ್ಟಿದ್ದೀರಾ ಎಂದರೆ ಇಲ್ಲ. ಸಾಕ್ಷಿಯು ನನ್ನ ತಾತನ ಹೆಸರಿಗೆ ಖಾತೆ ಇದ್ದಾಗ ಅವರೆ ಕಟ್ಟುತ್ತಿದ್ದರು ನಮ್ಮ ಹೆಸರಿಗೆ ಖಾತೆಯಾಗದೇ

ಇರುವ ಕಾರಣ ನಾವು ಕಂದಾಯ ಕಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ತಾತ ಅಂಜನಪ್ಪ ಬಿನ್ ಮುನಿಶ್ಯಾಮಪ್ಪ ಹಾಗೂ ದಾವಾ ಅಸ್ತಿಯ ಮಾಲೀಕರಾದ ಅಂಜಿನಪ್ಪ ಬಿನ್ ಲೇಟ್ ಮುನಿಯಪ್ಪ ಉಃ ಮುನಿಶ್ಯಾಮಪ್ಪ ಇಬ್ಬರು ಬೇರೆ ಬೇರೆ ಎಂದರೆ ಸರಿಯಲ್ಲ. ನಿಮ್ಮ ತಾತ ಅಂಜನಪ್ಪ ಬಿನ್ ಮುನಿಶ್ಯಾಮಪ್ಪನವರು ಕಂದಾಯ ಕಟ್ಟಿದ್ದ ಬಗ್ಗೆ ನ್ಯಾಯಾಲಯಕ್ಕೆ ರಶೀತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಈ ಅಂಜನಪ್ಪ ಮತ್ತು ಆ ಆಂಜನಪ್ಪನವರು ಬೇರೆ ಬೇರೆಯಾಗಿರುವ ಕಾರಣ ನನ್ನ ಹತ್ತಿರ ಯಾವುದೇ ಕಂದಾಯ ಪಾವತಿ ರಶೀತಿಗಳು ಇಲ್ಲ ಎಂದರೆ ಸರಿಯಲ್ಲ. ಯಾರೋ ರೈತರು ಅವರ ಜಮೀನಿನಲ್ಲಿ ಬೆಳೆದಿರುವ ರಾಗಿ ಬೆಳೆ ಮುಂದೆ ನಿಂತು ನಾನು ಇದೇ ದಾವಾ ಅಸ್ತಿ ಎಂದು ಪೋಟೋ ತೆಗೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಗಂಗಪ್ಪನವರ ಆಸ್ತಿ, ಪಶ್ಚಿಮಕ್ಕೆ : ಪಾಪಮ್ಮನವರ ಜಮೀನು, ಉತ್ತರ ಮತ್ತು ದಕ್ಷಿಣಕ್ಕೆ : ಹಳ್ಳ ಇರುತ್ತದೆ. ನಾನು ಹಾಜರುಪಡಿಸಿದ ಪೋಟೋಗಳಲ್ಲಿ ಯಾವುದೇ ಹಳ್ಳ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿಯು ಮರಗಳು ಕಾಣಿಸುತ್ತಿರುವ ಜಾಗವೆ ಹಳ್ಳ. ಮರಗಳು ಇರುವ ಕಾರಣ ಹಳ್ಳ ಕಾಣಿಸುತ್ತಿಲ್ಲ. ಬಿತ್ತನೆ ಮಾಡುವ ಸಮಯದಲ್ಲಿ ತೆಗೆದ ಪೋಟೋಗಳು , ಕುಯಿಲು ಮಾಡುವಾಗ ಮತ್ತು ಕಣ ಮಾಡುವಾಗ ತೆಗೆದ ಪೋಟೋಗಳನ್ನು ಏಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅವುಗಳು ಕೂಡ ಇದ್ದಾವೆ ಅವುಗಳನ್ನು ಹಾಜರುಪಡಿಸಿದ್ದೇನೆ.

ನಾನು ತೊಗರಿಘಟ್ಟ ಗ್ರಾಮದಲ್ಲಿ ಇದ್ದೇನೆ. ದಾವಾ ಆಸ್ತಿಯ ಕೆಸ್ತೂರು ಗ್ರಾಮದಲ್ಲಿದೆ. ನಮ್ಮ ಊರಿಗೂ ದಾವಾ ಆಸ್ತಿಗೂ **10** ಕೀ ಮೀ ದೂರದಲ್ಲಿದೆ. ನಾನು ದನ ಕರು, ಕುರಿಗಳನ್ನು ಸಾಕುತ್ತಿದ್ದೆ ಈಗ ಸುಮಾರು **10** ವರ್ಷಗಳಿಂದ ಅವುಗಳನ್ನು ಸಾಕುತ್ತಿಲ್ಲ. ನಿಪಿ **16** ಮತ್ತು **17** ಪೋಟೋದಲ್ಲಿ ಕಾರಣಿಸುತ್ತಿರುವ ರಾಗಿ ಹುಲ್ಲುಗಳನ್ನು ಹಸ್ಸುಗಳಿಗೆ ಮೇವು ಹಾಕಲು ಬಳಸುತ್ತಾರೆ ಎಂದರೆ ಸರಿ. ಯಾವುದೋ ರೈತರು ಹುಲ್ಲಿನ ಬೆಳವೆ ಮುಂದೆ ನಿಂತು ಪೋಟೋ ತೆಗೆಸಿದ್ದೇನೆ

ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಖರೀದಿಸಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.